ಹೇಳಿದೆ ಅಂತ ಮಾತ್ರ ಯಾರಿಗೂ ಗೊತ್ತಾಗೋದು ಬೇಡ' ಎಂದಳು ಪಾರ್ವತಜ್ಜಿ.

ಪಾರ್ವತಜ್ಜಿಯ ಬಾಯಿಂದ ಜೀವನ ಪ್ರೀತಿಯ ಮಾತುಗಳನ್ನು ಕೇಳಿ ಶಂಕರನಿಗೆ ಆಶ್ಚರ್ಯವಾಯಿತು. ಏಕೆಂದರೆ ಅಜ್ಜಿಗೆ ಹೃದಯಾಘಾತವಾದ ವಿಷಯ ಮನೆಯಲ್ಲಿ ಗೊತ್ತಾದಾಗ, ಪಾರ್ವತಜ್ಜಿಯನ್ನು ಬೆಂಗಳೂರಿನ ದೊಡ್ಡಾಸ್ಪತ್ರೆಗೆ ಸೇರಿಸಿ, ಚಿಕಿತ್ಸೆ ಕೊಡಿಸಲು ಎಲ್ಲರೂ ಸಲಹೆ ಕೊಟ್ಟಿದ್ದರು. ಆದರೆ ಆಸ್ಪತ್ರೆಗೆ ಹೋಗಲು ತನಗೆ ಇಷ್ಟವಿಲ್ಲ ಎಂದು ಅಮ್ಮನೇ ಹೇಳಿದ್ದಾಳೆಂದು ಇಬ್ಬರು ಮಕ್ಕಳು ಫೋನಾಯಿಸಿದ ಎಲ್ಲಾ ಬಂಧು ಬಳಗದವರಿಗೂ ತಿಳಿಸಿದ್ದರು. ಆದರೆ ಈಗ ಪಾರ್ವತಜ್ಜಿ ಹೇಳುವುದನ್ನು ಕೇಳಿದ ಮೇಲೆ ಶಂಕರನಿಗೆ ವಿಷಯ ನಿಧಾನವಾಗಿ ಅರ್ಥವಾಗತೊಡಗಿತು. ಪಾರ್ವತಜ್ಜಿ ಇಬ್ಬರು ಮಕ್ಕಳಿಗೆ ಸಮನಾಗಿ ಆಸ್ತಿ ಹಂಚಿಕೆ ಮಾಡಿದ್ದರೂ ಸಹ ತಮಗೆ ಬಂದ ಪಾಲಿನ ಬಗ್ಗೆ ಇಬ್ಬರು ಗಂಡು ಮಕ್ಕಳಿಗೂ ಅಸಮಾಧಾನವಿತ್ತು. ಹಾಗಾಗಿ ಪಾರ್ವತಜ್ಜಿಯನ್ನು ಆಸ್ಪತ್ರೆಗೆ ದೊಡ್ಡವನೇ ತೋರಿಸಲೆಂದು ಚಿಕ್ಕವನೂ, ಚಿಕ್ಕವನೇ ಬೇಕಾದರೆ ತೋರಿಸಲಿ ಎಂದು ದೊಡ್ಡವನೂ ನಿರೀಕ್ಷಿಸುತ್ತಾ ಇಬ್ಬರೂ ತಮ್ಮ ತಮ್ಮ ಜವಾಬ್ದಾರಿಯಿಂದ ನುಣುಚಿಕೊಂಡಿದ್ದರು. ಹಾಗಾಗಿ ಪಾರ್ವತಜ್ಜಿ ಹಾಸಿಗೆ ಹಿಡಿದು ಮೂಲೆ ಸೇರಿದರೂ ಕೂಡ ಯಾರೂ ಆಸ್ಪತ್ರೆಗೆ ಕರೆದುಕೊಂಡು ಹೋಗಿರಲಿಲ್ಲ. ಮಕ್ಕಳ ಮನಸ್ಥಿತಿಯನ್ನು ಅರ್ಥಮಾಡಿಕೊಂಡ ಪಾರ್ವತಜ್ಜಿಯೂ ಸಹ ಕೇಳಿದವರಿಗೆಲ್ಲಾ ತನಗೆ ಆಸ್ಪತ್ರೆ ಕಂಡರೆ ಭಯ, ಆಪರೇಷನ್ ಯಾವುದೇ ಕಾರಣಕ್ಕೂ ಮಾಡಿಸಿಕೊಳ್ಳಲಾರೆ ಎಂದು ಹೇಳುತ್ತಾ ಮಕ್ಕಳ ಮರ್ಯಾದೆಯನ್ನೂ ಹಾಗೂ ಅವರ ಹಣವನ್ನೂ ಕಾಪಾಡಿದ್ದಳು.

ಮನೆಗೆ ಬರುತ್ತಿದ್ದಂತೆ ಅಜ್ಜಿಯು ಹೇಳಿದ್ದನ್ನೆಲ್ಲಾ ಶಂಕರನು ತನ್ನ ತಾಯಿಗೆ ತಿಳಿಸಿದ. ಅದಕ್ಕೆ ಅವಳು 'ನನ್ನ ಅಣ್ಣಂದಿರ ಬಗ್ಗೆ ನನಗೆ ಗೊತ್ತು. ಅವರ್‍ಯಾರು ಅಮ್ಮನಿಗಾಗಿ ಒಂದು ರೂಪಾಯಿಯನ್ನೂ ಖರ್ಚುಮಾಡುವುದಿಲ್ಲ. ನಮ್ಮ ಹತ್ತಿರವೂ ಈಗ ಹಣ ಇಲ್ಲ. ನಿನ್ನ ಕೆಲಸಕ್ಕೆ ಹೇಗೋ ಹಣ ಹೊಂದಿಸಿದ್ದೇವೆ. ಕೆಲಸ ಗಿಟ್ಟಿಸಿಕೊಂಡರೆ ನಮಗೂ ಕೂಡ ಆಸರೆಯಾಗುತ್ತೆ. ಸಿಕ್ಕಿರುವ ಇಂತಹ ಒಳ್ಳೆಯ ಅವಕಾಶವನ್ನು ಕೈಬಿಟ್ಟರೆ ಮತ್ತೆ ಸಿಗುತ್ತದೆಯೇ? ಅಲ್ಲದೆ ಇರುವ ಆಸ್ತಿಯನ್ನೆಲ್ಲಾ ಅಮ್ಮ ಗಂಡುಮಕ್ಕಳಿಗೆ ಕೊಟ್ಟಿದ್ದಾಳೆ. ಈಗ ಅವರೇ ಆಸ್ಪತ್ರೆಗೆ ಸೇರಿಸಿ, ಖರ್ಚನ್ನೂ ಅವರೇ ನೋಡಿಕೊಳ್ಳಲಿ. ಈ ವಿಷಯದಲ್ಲಿ ನೀನು ಮುಂದೆ ಬಿದ್ದರೆ ಅದರ ಖರ್ಚೆಲ್ಲಾ ನಿನ್ನ ತಲೆ ಮೇಲೆ ಬೀಳುತ್ತೆ. ಮೊದಲು ನೀನು ಕೆಲಸ ಗಟ್ಟಿಮಾಡಿಕೊ. ಗಂಡುಮಕ್ಕಳಿಗಿಲ್ಲದ ಉಸಾಬರಿ ಮೊಮ್ಮಗನಾದ ನಿನಗ್ಯಾಕೆ?' ಎಂದು ಶಂಕರನಿಗೆ ಬುದ್ಧಿ ಹೇಳಿದಳು. 'ಸ್ವಲ್ಪದಿನ ಕಾದುನೋಡೋಣ. ಒಂದು ವೇಳೆ ಇಬ್ಬರು ಗಂಡುಮಕ್ಕಳೂ ಆಪರೇಷನ್ ಮಾಡಿಸಲು ಮುಂದಾಗದಿದ್ದರೆ, ಕೆಲಸಕ್ಕೆ ಸೇರಿ ಬರಲಿರುವ ನಿನ್ನ ಸಂಬಳದಲ್ಲಿ ನೀನೇ ಮಾಡಿಸಿದರಾಯಿತು' ಎಂಬ ಅಮ್ಮನ ಮಾತು ಶಂಕರನಿಗೆ ಸಮಂಜಸವೆನಿಸಿತು.

ಅಂತೂ ಹೇಗೋ ಶಂಕರನು ತನ್ನ ಜಿಲ್ಲೆಯಲ್ಲಿಯೇ ಸರ್ಕಾರಿ ಪಶುವೈದ್ಯನಾಗಿ ನೇಮಕವಾಗಿ ಮೂರು ತಿಂಗಳು ಕಳೆದಿತ್ತು. ಈ ಮಧ್ಯೆ ಅಜ್ಜಿಯು ಓಡಾಡದಿದ್ದರೂ ಸ್ವಲ್ಪ ಹುಷಾರಾಗಿದ್ದಾಳೆ ಎಂಬ ವಿಷಯ ಶಂಕರನಿಗೆ ತಲುಪುತ್ತಿತ್ತು. ಹೊಸ ಉದ್ಯೋಗದ ಕೆಲಸದ ಒತ್ತಡಗಳಲ್ಲಿ ಶಂಕರನಿಗೆ ಮತ್ತೆ ಅಜ್ಜಿಯ ಊರಿಗೆ ಹೋಗಲಾಗಲಿಲ್ಲ. ಆದರೆ ಅಜ್ಜಿಯ ಆಪರೇಷನ್ ವಿಷಯ ಶಂಕರನು ಮರೆತಿರಲಿಲ್ಲ. ಸಂಬಳ ಬಂದ ಮೇಲೆ ಊರಿಗೆ ಹೋಗಿ ಅಜ್ಜಿಯನ್ನು ತಾನೇ ಬೆಂಗಳೂರಿಗೆ ಕರೆತಂದು ಆಪರೇಷನ್ ಮಾಡಿಸಬೇಕು ಎಂದುಕೊಂಡಿದ್ದ ಶಂಕರನ ಆಸೆ ಅಂತೂ ನೆರವೇರಲಿಲ್ಲ. ದುರದೃಷ್ಟವಶಾತ್ ಪ್ರಥಮ ಸಂಬಳ ಶಂಕರನ ಕೈ ಸೇರಿದ ದಿನವೇ ಪಾರ್ವತಜ್ಜಿಯು ತೀರಿಕೊಂಡ ವಿಷಯ ಶಂಕರನಿಗೆ ತಲುಪಿತು. ಸಂಬಳ ಕೈಗೆ ಬಂದ ಸಂತೋಷದಲ್ಲಿದ್ದ ಶಂಕರನಿಗೆ, ಅಜ್ಜಿಯು ಅಗಲಿದ ಬರಸಿಡಿಲಿನ ವಿಷಯ ಅಪ್ಪಳಿಸಿದ ಮೇಲೆ ತನ್ನ ಉದ್ಯೋಗ, ಸಂಬಳ ಎಲ್ಲಾ ನಿರರ್ಥಕವೆನಿಸಿತು.

ಅಂತೂ ಶವಸಂಸ್ಕಾರಕ್ಕಾಗಿ ಕಾದು ಕುಳಿತಿದ್ದ ಬಂಧುಗಳಿಂದ ಸ್ವಲ್ಪ ದೂರದಲ್ಲಿ ತುಂಬಾ ಭಾವುಕನಾಗಿ ಯೋಚಿಸುತ್ತಾ ನಿಂತಿದ್ದ ಶಂಕರನಿಗೆ ಆಗ ತಾನೇ ಅಲ್ಲಿಗೆ ಬಂದ ವಾಹನದ ಹಾರ್ನ್ ಶಬ್ದ ಎಚ್ಚರಿಸಿತು. ಆ ವಾಹನದಲ್ಲಿ ಕೊನೆಗೂ ಅತ್ತೆಯ ಕಡೆಯವರೆಲ್ಲಾ ಬಂದಿಳಿದರು. ಬಂದವರೇ ರಾಶಿ ರಾಶಿ ಹೂವಿನ ಹಾರಗಳನ್ನು ಪಾರ್ವತಜ್ಜಿಯ ಕಳೇಬರಕ್ಕೆ ಹಾಕಿ,